ಮಾಳಗಾಲ ಗ್ರಾಮದ ಸ.ನಂ. 46 (6)ಎಗೆ ತಕರಾರು ರಹಿತ ಪತ್ರ ನೀಡಿಕೆ

79 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಶವಂತಪುರ ಹೋಬಳಿ ಮಾಳಗಾಲ ಗ್ರಾಮದ ಸ.ನಂ. 46ರ 6ಎ 26ಗುಂಟೆ ಜಮೀನನ್ನು ಹರಿಜನ, ಗಿರಿಜನ ಮತ್ತು ಆರ್ಥಿಕ ಹಿಂದುಳಿದ ಮನೆ ನಿವೇಶನ ರಹಿತರ ಸಂಘದ ಪರವಾಗಿ ಗೃಹ ಮಂಡಳಿಯಿಂದ ಬಡಾವಣೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ದಿನಾಂಕದಂದು ತಕರಾರು ರಹಿತ ಪತ್ರ ನೀಡಲಾಗಿದೆ?*

ಆ) *ಮೇಲ್ಕಂಡ ಸ್ವತ್ತು ಯಾರದ್ದು? ಪರಿವರ್ತನೆ ಆದೇಶ ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಗೃಹ ಮಂಡಳಿಗೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೀಡಿರುವುದಿಲ್ಲ. ಆದರೆ ಸದರಿ ಜಮೀನನ್ನು ಸಂಘಕ್ಕೆ ಹಸ್ತಾಂತರಿಸಿರುವುದಕ್ಕೆ ಅಭ್ಯಂತರವಿಲ್ಲವೆಂದು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ದಿನಾಂಕ 1-12-1983ರಂದು ತಿಳಿಸಲಾಗಿದೆ.

ಆ) ಪ್ರಸ್ತಾಪಿತ ಸ್ವತ್ತು ಸರ್ಕಾರಕ್ಕೆ ಸೇರಿದ್ದು ನಂತರ ಸದರಿ ಜಮೀನನ್ನು ಸರ್ಕಾರವು ಹರಿಜನ ಗಿರಿಜನ ಮತ್ತು ಆರ್ಥಿಕವಾಗಿ ಹಿಂದುಳಿದ ಮನೆ ನಿವೇಶನ ರಹಿತರ ಸಂಘದ ಪರವಾಗಿ ಕರ್ನಾಟಕ ಗೃಹ ಮಂಡಳಿಯವರಿಗೆ ನೀಡಿದೆ. ಪ್ರಸ್ತುತ ಜಮೀನನ್ನು ಉದ್ಯಾನವನದಿಂದ ವಸತಿ ಉಪಯೋಗಕ್ಕಾಗಿ ಬದಲಾವಣೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 19-10-92 ರಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ತದನಂತರ ಸರ್ಕಾರವು ಉದ್ಯಾನವನಕ್ಕಾಗಿ ಮೀಸಲಾಗಿಟ್ಟಿರುವ ಜಮೀನನ್ನು ಬೇರೆ ಉಪಯೋಗಕ್ಕಾಗಿ ಪರಿವರ್ತಿಸಬಾರದೆಂದು 18-1-93 ರಂದು ಸುತ್ತೋಲೆ ಹೊರಡಿಸಿದ ಕಾರಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 15-6-93 ರಂದು 19-10-92ರ ಠರಾವನ್ನು ಹಿಂತೆಗೆದುಕೊಂಡಿದೆ.

ಅಧಿಸೂಚಿತ ಪ್ರದೇಶಗಳಿಗೆ ಮಂಜೂರು ಮಾಡಿದ ಹಣ

81 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಸುತ್ತ ಸ್ಥಾಪಿತಲಾಗಿರುವ ಅಧಿಸೂಚಿತ ಪ್ರದೇಶಗಳಿಗೆ ಸರ್ಕಾರವು ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿರುವ ಹಣವೆಷ್ಟು? (ನೋಟಿಫೈಡ್*

ಏರಿಯಾದ ಆದಾಯ ಮತ್ತು ಸರ್ಕಾರದಿಂದ ಬಿಡುಗಡೆಯಾದ ಹಣ, ಸ್ಟಾಂಪ್ ಡ್ಯೂಟಿಯಿಂದ ನೀಡಿರುವ ಹಣ - ಪ್ರತ್ಯೇಕ ವಿವರಗಳು)

ಆ) 1994ರ ವಿಧಾನಸಭೆ ಚುನಾವಣೆಗಿಂತ ಮೊದಲು ಈ ಎಲ್ಲಾ ನೋಟಿಫೈಡ್ ಏರಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಂದಿನ ಶಾಸಕರು. ಅಥವಾ ಸಚಿವರುಗಳ ಮೌಖಿಕ ನಿರ್ದೇಶನದಂತೆ ತಮ್ಮಲ್ಲಿ ಲಭ್ಯವಿದ್ದ ಹಣಕ್ಕಿಂತ ಹೆಚ್ಚು ಖರ್ಚು ಮಾಡಿ ಕಾಮಗಾರಿಗಳನ್ನು ಕೈಗೊಂಡಿರುವುದು ನಿಜವೇ? ಹಾಗಿದ್ದಲ್ಲಿ, ಪ್ರತಿ ನೋಟಿಫೈಡ್ ಏರಿಯಾದಲ್ಲಿ ಕಂಟ್ರಾಕ್ಟುದಾರರಿಗೆ ಪಾವತಿ ಮಾಡಬೇಕಾಗಿರುವ ಮೊತ್ತವೆಷ್ಟು?

ಇ) ಈ ನೋಟಿಫೈಡ್ ಏರಿಯಾದ ಜನರಿಗೆ ಕುಡಿಯುವ ನೀರು, ಸ್ವಚ್ಛತೆ ಮತ್ತು ಬೀದಿ ದೀಪಗಳಂತಹ ಪ್ರಾಥಮಿಕ ಸೌಲಭ್ಯಗಳನ್ನು ಒದಿಗಸುವಲ್ಲಿ ಅಧಿಸೂಚಿತ ಪ್ರದೇಶಗಳಲ್ಲಿನ ಸಮಿತಿಗಳು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ನೋಟಿಫೈಡ್ ಏರಿಯಾ ಪ್ರದೇಶಗಳನ್ನು ಬೆಂಗಳೂರು ಮಹಾನಗರಪಾಲಿಕೆ ಅಥವಾ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ತರಲು ತೊಂದರೆ ಏನು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ)

		ರೂ. ಲಕ್ಷಗಳಲ್ಲಿ
1.	ಸರ್ಕಾರದ ಅನುದಾನ	240.00
2.	ಅಧಿಸೂಚಿತ ಪ್ರದೇಶ ಸಮಿತಿಗಳ ಆದಾಯ (ಕರ ವಸೂಲಾತಿ)	291.47
3.	ಸ್ಟಾಂಪ್ ಶುಲ್ಕ	149.70
	ಒಟ್ಟು	**681.17**

ಆ) ಮೂಲಭೂತ ಸೌಲಭ್ಯಗಳನ್ನು ಉತ್ತಮ ಪಡಿಸಲು ಅನೇಕ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿರುವುದು ನಿಜ. ಕಂಟ್ರಾಕ್ಟರುಗಳಿಗೆ ಪಾವತಿ ಮಾಡಬೇಕಾಗಿರುವ ಬಾಕಿ ಹಣದ ವಿವರ ಈ ಕೆಳಕಂಡಂತಿವೆ.

ಅಧಿಸೂಚಿತ ಸಮಿತಿ ಹೆಸರು	ಬಾಕಿ ರೂ. (ಲಕ್ಷಗಳಲ್ಲಿ)
ದಾಸರಹಳ್ಳಿ	5.93
ಸಾಣೆಗುರುವನಹಳ್ಳಿ	20.00
ಸಾರಕ್ಕಿ	28.72
ಹೆಬ್ಬಾಳ	7.00

ಇ) ನೀರು, ಸ್ವಚ್ಛತೆ ಮತ್ತು ಬೀದಿದೀಪಗಳಂತಹ ಮೂಲಭೂತ ಸೌಕರ್ಯಗಳನ್ನು ಉತ್ತಮ ಪಡಿಸಲು ಪ್ರಯತ್ನಿಸಲಾಗುತ್ತಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಯೋಜನಾ ಪ್ರಾಧಿಕಾರವಾಗಿರುವುದರಿಂದ ಅಧಿಸೂಚಿತ ಪ್ರದೇಶಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ತರಲಾಗುವುದಿಲ್ಲ. ಇವುಗಳನ್ನು ಬೆಂಗಳೂರು ಮಹಾನಗರಪಾಲಿಕೆಯ ಜೊತೆಗೆ ವಿಲೀನಗೊಳಿಸಬೇಕೇ ಅಥವಾ ಪ್ರತ್ಯೇಕವಾಗಿ ಮುನಿಸಿಪಾಲಿಟಿಗಳಾಗಿ ರಚಿಸಬೇಕೇ ಎಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಕಾಪು ಪೋಲೀಸ್ ಠಾಣೆ ಸಿಬ್ಬಂದಿಗೆ ವಸತಿ ಗೃಹಗಳು

82 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪುವಿನ ಪೋಲೀಸ್ ಠಾಣೆ ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಿಸಲು ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದರೆ ಕಾಮಗಾರಿಗೆ ಎಷ್ಟು ಹಣ ಮಂಜೂರಾಗಿದೆ

ಇ) ಕಾಮಗಾರಿ ಈಗ ಯಾವ ಹಂತದಲ್ಲಿದೆ

ಈ) ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಕಾಪುವಿನ ಹೊರ ಪೋಲೀಸ್ ಠಾಣೆಗೆ 1 ಹೆಡ್‌ಕಾನ್ಸ್‌ಟೇಬಲ್, 4 ಪೋಲೀಸ್ ಕಾನ್ಸ್‌ಟೇಬಲ್‌ಗಳ ವಸತಿ ಗೃಹ ನಿರ್ಮಿಸಲು ಸರ್ಕಾರದಿಂದ ದಿನಾಂಕ 24-11-1993ರಂದು ಮಂಜೂರಾತಿ ನೀಡಲಾಗಿದೆ.

ಆ) ರೂ. 13.75 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಇ) ಕಾಮಗಾರಿಯು ಪ್ಲಿಂತ್ ಬೀಮ್‌ನವರೆಗೆ ಬಂದಿದೆ.

ಈ) ಏಪ್ರಿಲ್ 1996ರ ಒಳಗಾಗಿ ಪೂರ್ಣಗೊಳಿಸಬಹುದೆಂಬ ನಿರೀಕ್ಷೆಯಿದೆ.

ಬೆನಕಾಪುರ - ನಾಗೇನಹಳ್ಳಿ ಏತ ನೀರಾವರಿ ಯೋಜನೆ

83 - ಶ್ರೀ ಜಿ. ಶಂಕರ್‌ಗೌಡ (ಹೊಸಪೇಟೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ತಾಲ್ಲೂಕಿನ ಬೆನಕಾಪುರ-ನಾಗೇನಹಳ್ಳಿ ಏತ ನೀರಾವರಿ ಯೋಜನೆಗೆ ಇಂದಿನ ಮುಖ್ಯಮಂತ್ರಿಗಳು 9 ವರ್ಷಗಳ ಹಿಂದೆ ಅಸ್ತಿ ಭಾರ ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;